**ಭಾರಿ ಮಳೆಯಿಂದ ದೊಡ್ಡಬಳ್ಳಾಪುರದ ತಾಲ್ಲೂಕಿನಲ್ಲಿ ಮನೆಗಳಿಗೆ ಆಗಿರುವ ಹಾನಿ.**

1062 - ಶ್ರೀ ಆರ್.ಎಲ್. ಜಾಲಪ್ಪ (ದೊಡ್ಡಬಳ್ಳಾಪುರ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) 1991ರ ಆಕ್ಟೋಬರ್ ಮತ್ತು ನವೆಂಬರ್ ತಿಂಗಳುಗಳಲ್ಲಿ ಬಿದ್ದ ಭಾರೀ ಮಳೆಯಿಂದಾಗಿ ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ ಹಾನಿಗೊಳಗಾದ ಮನೆಗಳ ಸಂಖ್ಯೆ ಎಷ್ಟು?*

*ಆ) ಇವುಗಳಲ್ಲಿ ಪೂರ್ಣ ಹಾಗೂ ಭಾಗಶಃ ಹಾನಿಗೊಳಗಾಗಿರುವ ಮನೆಗಳೆಷ್ಟು?*

*ಇ) ಅಂತಹ ಮನೆಗಳ ಪೈಕಿ ಸರ್ಕಾರವು ಪುನರ್ ನಿರ್ಮಾಣ ಮಾಡಿರುವ ಮನೆಗಳ ಸಂಖ್ಯೆ ಎಷ್ಟು?*

*ಈ) ಇದುವರೆಗೂ ನೀಡಿರುವ ಪರಿಹಾರದ ಮೊತ್ತವೆಷ್ಟು?*

ಶ್ರೀ ಎಂ. ರಾಜಶೇಖರ ಮೂರ್ತಿ (ಕಂದಾಯ ಸಚಿವರು):

ಅ) ಹಾನಿಗಳಾದ ಒಟ್ಟು ಮನೆಗಳು 12630.

ಆ)

| | |
|---|---|
| 1) ಪೂರ್ಣ ಹಾನಿಯಾಗಿರುವ ಮನೆಗಳ ಸಂಖ್ಯೆ | 3307 |
| 2) ಭಾಗಶಃ ಹಾನಿಗೊಳಗಾಗಿರುವ ಮನೆಗಳ ಸಂಖ್ಯೆ | 9323 |
| ಒಟ್ಟು | 12630 |

ಇ) ಇಲ್ಲ. ಆದರೆ, ಆಶ್ರಯ ಮಾದರಿ ಮನೆಗಳನ್ನು ನಿರ್ಮಾಣ ಮಾಡಲು, ಈ ತಾಲ್ಲೂಕಿನಿಂದ 2243 ಮನೆಗಳನ್ನು ನಿರ್ಮಿಸುವ ಪ್ರಸ್ತಾವನೆಯನ್ನು ಕರ್ನಾಟಕ ಗೃಹ ಮಂಡಲಿಗೆ ಸಲ್ಲಿಸಲಾಗಿದೆ.

ಈ) ಈವರೆಗೆ ರೂ. 95.00 ಲಕ್ಷಗಳನ್ನು ಪರಿಹಾರವಾಗಿ ನೀಡಿದೆ.

**ರಾಜ್ಯದಲ್ಲಿ ವಿವಿಧ ಮೂಲಗಳಿಂದ ನೀರಾವರಿಯಾಗುತ್ತಿರುವ ಸಾಗುವಳಿ ಪ್ರದೇಶ.**

1068 - ಶ್ರೀ ಸಾದತ್ ಅಲಿಖಾನ್ (ಚನ್ನಪಟ್ಟಣ): ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ರಾಜ್ಯದಲ್ಲಿ ವಿವಿಧ ಮೂಲಗಳಿಂದ ನೀರಾವರಿಯಾಗುತ್ತಿರುವ ಸಾಗುವಳಿ ಪ್ರದೇಶ.*

*ಆ) ಕರ್ನಾಟಕ ರಾಜ್ಯಕ್ಕೆ ಕೃಷಿ ಸಾಗುವಳಿ ಮಾಡಲು ಬೇಕಾಗುವ ಪ್ರಮಾಣವೆಷ್ಟು?*

*ಇ) ಇದರಲ್ಲಿ ಚೆನ್ನಪಟ್ಟಣ ತಾಲ್ಲೂಕಿಗೆ ಕೃಷಿ ಸಾಗುವಳಿಗೆ ಬೇಕಾಗುವ ಬಿತ್ತನೆ ಬೀಜಗಳ ಪ್ರಮಾಣವೆಷ್ಟು?*

*ಈ) ಸರ್ಕಾರವು ಬೆಂಗಳೂರು ಗ್ರಾಮೀಣ ಜಿಲ್ಲೆಯಲ್ಲಿ ಶೇಕಡಾವಾರು ವಿತರಣೆ ಮಾಡಿರುವ ಅಧಿಕ ಇಳುವರಿತಳಿಗಳ ಬಿತ್ತನೆ ಬೀಜದ ಪ್ರಮಾಣವೆಷ್ಟು?*

(ತಾಲ್ಲೂಕುವಾರು ವರ್ಷವಾರು ಅಂದರೆ 1989-90 90-91, 91-92ರಿಂದ ಇಂದಿನವರೆಗಿನ ಪ್ರಗತಿ)

ಶ್ರೀ ಎಸ್. ಹುಚ್ಚಮಾಸ್ತಿಗೌಡ (ಕೃಷಿ ಸಚಿವರು):